ಉ) ಶ್ರೀಯುತರುಗಳಾದ

1.	ಫಲ್ಗುಣಿ ರಾಜ್‌ಕುಮಾರ್, ಭಾ.ಆ.ಸೇ. ಸಿ.ಎಂ.ಡಿ.	16-10-85 ರಿಂದ 17-02-1989
2.	ಸುಭೀರ್‌ವರಿಸಿಂಗ್, ಭಾ.ಆ.ಸೇ ಸಿ.ಎಂ. ಪಿ.	17-02-89 ರಿಂದ 23-05-1989
3.	ಆರ್. ಶಂಕರಪ್ಪ, ಭಾ.ಆ.ಸೇ	23-05-89 ರಿಂದ 28-05-1990
4.	ಜೆ. ಇ. ಜಾರ್ಜ್, ಐ.ಪಿ.ಎಸ್.	28-05-90 ರಿಂದ 19-11-1990
5.	ವಿಜಯ್ ಗೋರೆ, ಭಾ.ಆ.ಸೇ ಸಿ.ಎಂ.ಡಿ.	19-11-90 ರಿಂದ 07-12-1992
6.	ಎಂ. ಮಹೇಶನ್, ಭಾ.ಆ.ಸೇ. ಸಿ.ಎಂ.ಡಿ.	07-12-92 ರಿಂದ 28-10-1993.
7.	ಶ್ರೀಮತಿ ವೀಣಾ ಶ್ರೀರಾಮರಾವ್, ಭಾ.ಆ.ಸೇ. ಸಿ.ಎಂ.ಪಿ.	28-10-93 ರಿಂದ ಇಲ್ಲಿಯವರೆಗೆ

ವಿಷಯ : ಮಂಗಳೂರಿನ ಎಂ.ಆರ್.ಪಿ.ಎಲ್. ಸಂಸ್ಥೆಯಿಂದ ಉತ್ಪನ್ನವಾಗುವ ಪೆಟ್ರೋಲಿಯಂ ಉತ್ಪನ್ನ

1468 (1938)-ಶ್ರೀ ಡಿ. ವಿ. ಸದಾನಂದ ಗೌಡ (ಪುತ್ತೂರು) : ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು ಮತ್ತು ಮೂಲಭೂತ ಸೌಕರ್ಯಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಂಗಳೂರಿನ ಎಂ.ಆರ್.ಪಿ.ಎಲ್. ಸಂಸ್ಥೆಯಿಂದಉತ್ಪನ್ನವಾಗುವ ಪೆಟ್ರೋಲಿಯಂ ಉತ್ಪನ್ನಗಳನ್ನು ಹೆಚ್.ಪಿ.ಸಿ.ಎಲ್. ಸಂಸ್ಥೆ ನೆಲ ಮಾರ್ಗವಾಗಿ ಪೈಪ್ ಮುಖಾಂತರ ಬೆಂಗಳೂರಿಗೆ ರವಾನಿಸುವ ಯೋಜನೆ ಹೋಂದಿದೆಯೇ?

ಆ) ಹಾಗಿದ್ದಲ್ಲಿ ಸಾವಿರಾರು ಎಕರೆ ಕೃಷಿ ಹಾಗೂ ದಟ್ಟ ಅರಣ್ಯಗಳು ನಾಶವಾಗುವುದಿಲ್ಲವೇ.

ಇ) ಮಂಗಳೂರು - ಬೆಂಗಳೂರು ರೈಲು ಮಾರ್ಗವಿದ್ಯೂ ನೆಲಮಾರ್ಗದ ಮೂಲಕ, ಸಾವಿರಾರು ಎಕರೆ ಕೃಷಿ ಮತ್ತು ಅರಣ್ಯ ಭೂಮಿ ನಾಶವಾಗುವ ಹಿನ್ನೆಲೆಯಲ್ಲಿ ಈ ಯೋಜನೆಗೆ ಸರ್ಕಾರ ಹೆಚ್ಚಿನ ಒತ್ತು ಕೊಡಲು ಕಾರಣಗಳೇನು?

ಶ್ರೀ ಆರ್. ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು ಮತ್ತು ಮೂಲಭೂತ ಸೌಕರ್ಯಗಳ ಸಚಿವರು)

ಅ) ಹೌದು

ಆ) ಇಲ್ಲ. ಸದರಿ ಪೈಪ್‌ಲೈನ್ ಮಾರ್ಗದ ಅಂದಾಜು ಉದ್ದವು ಸುಮಾರು 350 ಕಿ.ಮಿ. ಆಗಿದ್ದು ಅದರಲ್ಲಿ ಅರಣ್ಯದಲ್ಲಿ ಹೌದು ಹೋಗುವ ಮಾರ್ಗ ಕೇವಲ 3 ಕಿ.ಮೀ ಮಾತ್ರ ಆಗಿರುತ್ತದೆ. ಫಲವತ್ತಾದ ಕೃಷಿ ಭೂಮಿಯ ಮೂಲಕ ಪೈಪ್‌ಲೈನ್ ಹೌದು ಹೋಗುವಂತೆ ಮಾರ್ಗವನ್ನು ಗುರುತಿಸಲಾಗಿದೆ.

ಇ) ಹೆಚ್. ಪಿ. ಸಿ. ಎಲ್, ಸಂಸ್ಥೆಯು ರೈಲ್ವೇ ಮಂಡಳಿಯಲ್ಲಿ ಪಡೆದ ಮಾಹಿತಿಯಂತೆ 2001-2 ಇಸವಿಯ ವೇಳೆಗೆ ಬೆಂಗಳೂರು ಮತ್ತು ಮಂಗಳೂರಿನ ಮಧ್ಯೆ ರೈಲ್ವೆ ಸಾಗಾಣಿಕೆಯ ಒತ್ತಡ ಜಾಸ್ತಿಯಾಗುವ ಹಿನ್ನೆಲೆಯಲ್ಲಿ ಹಾಗೂ ರೈಲ್ವೆ ಮಾರ್ಗವನ್ನು ದ್ವಿಗುಣಗೊಳಿಸುವ ಯೋಜನೆಯಲ್ಲಿ ಇಲ್ಲದೇ ಇರುವುದರಿಂದ ಪೆಟ್ರೋಲಿಯಂ ಉತ್ಪನ್ನಗಳ ಸಾಗಾಣಿಕೆ ಬದಲಿ ವ್ಯವಸ್ಥೆ ಮಾಡುವುದು ಅನಿವಾರ್ಯವಾಗಿರುತ್ತದೆ. ಆದ್ದರಿಂದ ಹಲವಾರು ವಿಧದಲ್ಲಿ ಲಾಭದಾಯಕವಾಗಿರುವ ಅಂದರೆ ಕಡಿಮೆ ವೆಚ್ಚ ನಿರಂತರ ಸಾಗಾಣಿ ವ್ಯವಸ್ಥೆ ಮಾಲಿನ್ಯರಹಿತ ವ್ಯವಸ್ಥೆಯಾದ ಪೈಪ್‌ಲೈನ್ ಮೂಲಕ ಪೆಟ್ರೋಲಿಯಂ ಉತ್ಪನ್ನಗಳನ್ನು ಮಂಗಳೂರಿನಿಂದ ಬೆಂಗಳೂರಿಗೆ ಸಾಗಿಸಲು ಯೋಜನೆಯನ್ನು ಸಿದ್ಧಪಡಿಸಿ ಹೆಚ್.ಪಿ.ಸಿ.ಎಲ್. ಸಂಸ್ಥೆಯು ಸರ್ಕಾರಕ್ಕೆ ಸಲ್ಲಿಸಿದ್ದು ಈ ಬಗ್ಗೆ ಇನ್ನು ಅಂತಿಮ ತೀರ್ಮಾನವನ್ನು ಸರ್ಕಾರ ಕೈಗೊಂಡಿರುವುದಿಲ್ಲ.

ವಿಷಯ : ಪುತ್ತೂರು ಪುರಸಭಾ ವ್ಯಾಪ್ತಿಯ ವಿಸ್ತೃತ ಜಾಗಗಳಿಗೆ ಕುಡಿಯುವ ನೀರಿನ ಸೌಲಭ್ಯ.

1470 (1937)-ಶ್ರೀ ಡಿ. ವಿ. ಸದಾನಂದ ಗೌಡ (ಪುತ್ತೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಪುತ್ತೂರು ಪುರಸಭಾ ವ್ಯಾಪ್ತಿಯ ವಿಸ್ತೃತ ಜಾಗಗಳಿಗೆ ಕುಡಿಯುವ ನೀರಿನ ಸೌಲಭ್ಯ ಹಿಂದಿನ ಪಂಚಾಯತ್ ವ್ಯಾಪ್ತಿಗೆ ಸೇರಿದ್ದಾಗಿದ್ದು, ಪ್ರಸ್ತುತ ಈ ಭಾಗದ ಜನರಿಗೆ ಕುಡಿಯುವ ನೀರಿಗಾದ ತೊಂದರೆಯನ್ನು ನಿವಾರಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?